ಪ್ರಕಾರ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಹುದ್ದೆಯು ರೂ. 1900–3650 ಗಳ ವೇತನ ಶ್ರೇಣಿಯನ್ನು ಹೊಂದಿದ ಸಮೂಹ 'ಬ' ಹುದ್ದೆಯಾಗಿರುತ್ತದೆ.

ಆ. ಕ್ಷೇತ್ರಾಭಿವೃದ್ಧಿ ಅಧಿಕಾರಿ ಹುದ್ದೆಯನ್ನು ಮೇಲ್ದರ್ಜೆಗೆ ಏರಿಸುವ ಪ್ರಸ್ತಾವನೆಯನ್ನು ಕರ್ನಾಟಕ ನಾಲ್ಕನೆ ವೇತನ ಆಯೋಗದ ಪರಿಶೀಲನೆಗಾಗಿ ಮಂಡಿಸಿದೆ.

ರೈತರು ಬೆಳೆದ ಬೆಳೆಗಳಿಗೆ ಸಿಗುತ್ತಿರುವ ಬೆಲೆ ಕುರಿತು

(1711): ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ):– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರೈತರು ಬೆಳೆದ ಬೆಳೆಗಳಿಗೆ ಸಿಗುತ್ತಿರುವ ಬೆಲೆ ರೈತರು ಬೆಳೆ ಬೆಳೆಯಲು ಖರ್ಚು ಮಾಡಿದ ಹಣಕ್ಕಿಂತಲೂ ಕಡಿಮೆ ಹಣವನ್ನು ಪಡೆಯುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈ ಗೊಂಡಿರುವ ಕ್ರಮವೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):–

ಅ. ರಾಜ್ಯದಲ್ಲಿ ಬೆಳೆಯುವ ಮುಖ್ಯ ಕೃಷಿ ಉತ್ಪನ್ನಗಳಿಗೆ 1992–93ನೇ ಸಾಲಿಗೆ ಶಿಫಾರಸ್ಸು ಮಾಡಿದ ಬೆಂಬಲ ಬೆಲೆಗಳನ್ನು, ಇದೇ ವರ್ಷ ಮಾರುಕಟ್ಟೆಗಳಲ್ಲಿ ಮಾರಾಟವಾದ ಬೆಲೆಗಳಿಗೆ ಹೋಲಿಸಿದಲ್ಲಿ ಶಿಫಾರಸ್ಸು ಮಾಡಿದ ಬೆಲೆಗಿಂತ (ಉತ್ಪಾದನಾ ವೆಚ್ಚ) ಕಡಿಮೆ ಬೆಲೆಯಲ್ಲಿ ಮಾರಾಟವಾಗಿರುವುದು ಹೆಚ್ಚಾಗಿ ಕಂಡು ಬಂದಿರುವುದಿಲ್ಲ.

ಆ. ಒಂದು ವೇಳೆ ಕಡಿಮೆಯಾದಲ್ಲಿ ರೈತನು ಬೆಳೆದ ಬೆಳೆಗಳ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರಕಿಸಿಕೊಡುವುದು ರಾಜ್ಯ ಸರ್ಕಾರದ ಉದ್ದೇಶವಾಗಿರುತ್ತದೆ. ಆದರೆ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಗಳನ್ನು ನಿರ್ಧರಿಸುವುದು ಕೇಂದ್ರ ಸರ್ಕಾರದ ಕಾರ್ಯ ನೀತಿ ವಿಷಯವಾಗಿರುತ್ತದೆ. ಈ ವಿಚಾರದಲ್ಲಿ ರಾಜ್ಯ ಸರ್ಕಾರವು ಸೂಚನಾ ರೂಪದಲ್ಲಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದಾಗಿರುತ್ತದಷ್ಟೆ. ರಾಜ್ಯದ ವಿವಿಧ ಬೆಳೆಗಳ ಸಾಗುವಳಿ ಹಾಗೂ ಉತ್ಪನ್ನಗಳ ಮತ್ತು ಖರ್ಚುಗಳ ಅಧ್ಯಯನ ನಡೆಸಲು ರಾಜ್ಯ ಸರ್ಕಾರವು ತನ್ನದೇ ಆದ ಒಂದು ಕೃಷಿ ನಿರ್ವಹಣಾ ವಿಭಾಗವನ್ನು ಕೃಷಿ ಇಲಾಖೆ ಆಡಿಯಲ್ಲಿ ಹೊಂದಿರುತ್ತದೆ. ಈ ವಿಭಾಗವು ವಿವಿಧ ಕೃಷಿ ಬೆಳೆಗಳ ಉತ್ಪನ್ನದ ಖರ್ಚನ್ನು ವೈಜ್ಞಾನಿಕವಾಗಿ ಕಂಡುಹಿಡಿದು ಆದಕ್ಕೆ ಉಬ್ಬರದ ಬಾಬ್ತು ಹಾಗೂ ಶೇ. 15ರಷ್ಟು ಲಾಭಾಂಶವನ್ನು ಸೇರಿಸಿ ಕೇಂದ್ರದ ಕೃಷಿ ವೆಚ್ಚ ಮತ್ತು ಬೆಲೆ ಆಯೋಗಕ್ಕೆ ರಾಜ್ಯ ಸರ್ಕಾರದ ಮೂಲಕ ಬೆಂಬಲ ಬೆಲೆ ನಿರ್ಧರಿಸುವುದಕ್ಕೋಸ್ಕರ ಸೂಚನಾ ರೂಪದಲ್ಲಿ ಕಳುಹಿಸಿಕೊಡುತ್ತದೆ. ಆದರೆ ಕೇಂದ್ರ ಸರ್ಕಾರವು ವಿವಿಧ ರಾಜ್ಯಗಳ ಸಲಹೆಗಳನ್ನಲ್ಲದೇ ರಾಷ್ಟ್ರಮಟ್ಟದ ಇತರೇ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಬೆಂಬಲ ಬೆಲೆಗಳನ್ನು ನಿರ್ಧರಿಸುತ್ತಿದೆ.

ಭೂಸೇನಾ ನಿಗಮದವರಿಂದ ಸೇಡಂ ತಾಲ್ಲೂಕಿನಲ್ಲಿ ಕಳಪೆ ದರ್ಜೆಯ ಮನೆ ನಿರ್ಮಾಣ

(1764): ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):– ಮಾನ್ಯ ಸಕ್ಕರೆ ಮತ್ತು ಭೂಸೇನಾ ನಿಗಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ಆಲೂರು (ಕೆ) ಗ್ರಾಮದಲ್ಲಿ